ಆಮೇಲೆ ಸಂದೇಶ್ ಮತ್ತು ನವ್ಯಳನ್ನು ವೇದಿಕೆಗೆ ಕರೆದು ಈತನಕ ಆದ ಬೆಳವಣಿಗೆಗಳನ್ನು ಎಲ್ಲರಿಗೂ ತಿಳಿಸಲು ಅವರಲ್ಲಿ ಹೇಳಿದ.

ನೆರೆದಿದ್ದ ಜನ ಕುತೂಹಲದಿಂದ ಕೇಳತೊಡಗಿದರು.

ನವ್ಯ ಮೊದಲಿಗೆ ಮಾತನಾಡಿದಳು. 'ನೋಡಿ, ನಾನು ಹೇಳುವ ಇದು ನನ್ನ ಮೊದಲ ದೊಡ್ಡ ಪ್ರಕಟಣೆ. ನಿಮಗೆ ನಮ್ಮೂರ ಮಾದ ಗೊತ್ತಿರುವವರೇ. ಅವರು ಸೀತಾಪುರ ಬಿಟ್ಟು ಬೇರೆಲ್ಲಿಗೂ ಜೀವನಪೂರ್ತಿ ಹೋದವರಲ್ಲ. ಆದರೆ ಈಗ ಜರ್ಮನಿಯ ಒಂದು ದೊಡ್ಡ ಯೂನಿವರ್ಸಿಟಿ ಅವರನ್ನು ಜರ್ಮನಿಗೆ ಒಂದು ತಿಂಗಳ ಅವಧಿಗೆ ಭೂತದ ಕೋಲದ ಮಾಹಿತಿಗಾಗಿ ಕರೆಸಿಕೊಳ್ಳುತ್ತಿದೆ. ನಮ್ಮ ಮಾದ ಬರುವ ತಿಂಗಳು ಒಂದು ತಿಂಗಳ ಮಟ್ಟಿಗೆ ಜರ್ಮನಿಗೆ ಹೋಗುತ್ತಿದ್ದಾರೆ.'

ಇಡೀ ಸಭೆಗೆ ಒಂದು ಕ್ಷಣ ಬಾಂಬ್ ಹಾಕಿದ ಅನುಭವವಾಯಿತು. ಯಾರಿಗೂ ಇದನ್ನು ನಂಬಲು ಆಗಲಿಲ್ಲ. ಮಾದನಿಗೆ ಸ್ವತಃ ತನ್ನ ಕಿವಿಯನ್ನು ತಾನೇ ನಂಬಲು ಆಗದಾಯಿತು. ಯಾರೋ ಒಬ್ಬ ಯುವಕ ಸಭೆಯಲ್ಲಿ ಎದ್ದು ನಿಂತು, 'ಇದರಲ್ಲಿ ಮಾದನಿಗೆ ಹಣ ಸಿಗುತ್ತದೆಯೇ?' ಎಂದು ಪ್ರಶ್ನಿಸಿದ.

ನವ್ಯ 'ಸ್ಸಾರಿ, ಮರೆತೇಬಿಟ್ಟೆ, ಅದನ್ನು ನಾನು ಆಗಲೇ ಹೇಳಬೇಕಿತ್ತು. ಹೌದು, ಮಾದನವರ ಜರ್ಮನಿ ಪ್ರಯಾಣದ ವೆಚ್ಚವಲ್ಲದೆ ಆ ಯೂನಿವರ್ಸಿಟಿ ಅವರಿಗೆ ಹನ್ನೆರಡು ಸಾವಿರ ಯುರೋ, ಅಂದರೆ ಸುಮಾರು ಹತ್ತು ಲಕ್ಷ ರೂಪಾಯಿ ಕೊಡುತ್ತದೆ' ಎಂದಳು.

ಸಭೆ ರೋಮಾಂಚನಗೊಂಡಿತು. ಜನ ಒಮ್ಮೆಗೆ ಖುಷಿಯಿಂದ ಸಿಳ್ಳು ಹೊಡೆದರು. ಮಾದ ಹತ್ತು ಲಕ್ಷ ಬಿಡಿ, ಹತ್ತು ಸಾವಿರ ರೂಪಾಯಿಯನ್ನೂ ತನ್ನ ಜೀವಮಾನದಲ್ಲಿ ನೋಡಿದವನಲ್ಲ ಎಂದು ಖುಷಿಪಟ್ಟರು.

ಅಷ್ಟರಲ್ಲಿ ನವ್ಯ 'ನಿಮ್ಮ ಸಿಳ್ಳು ನಿಲ್ಲಿಸಿ, ನಿಮಗೆಲ್ಲಾ ಸಂತೋಷವಾಗುವ ಇನ್ನೊಂದು ವಿಷಯ ಹೇಳ್ತೀನಿ' ಅಂದಳು. ಇಡೀ ಸಭೆ ಮತ್ತೆ ಮೌನವಾಯ್ತು.

'ನಮ್ಮ ಸೀತಾಪುರದ ಕಾಡು ಹಾಗೂ ಇದರ ಪ್ರಾಣಿ ಪ್ರಪಂಚ ಭಾರೀ ಅಪರೂಪದ್ದು. ಇದನ್ನು ಅಧ್ಯಯನ ಮಾಡಲು ವಿಶ್ವಸಂಸ್ಥೆಯ ಅಂಗ ಸಂಸ್ಥೆಯಿಂದ ಗ್ರಾಂಟ್ ಸಿಕ್ಕಿದೆ. ಇದರ ಪ್ರಕಾರ, ಇಲ್ಲಿ ಒಂದು ಬಯೋಡೈವರ್ಸಿಟಿ ಸ್ಟಡಿ ಸೆಂಟರ್ ಮಾಡಲಾಗುತ್ತದೆ. ಅಲ್ಲಿ ಸುಮಾರು ಹತ್ತು–ಹದಿನೈದು ಜನಕ್ಕೆ ಉತ್ತಮ ವೇತನದ ಕೆಲಸ ಸಿಗುತ್ತದೆ. ಹಾಗೇ ಅಧ್ಯಯನ ಮಾಡಲು ಒಂದು ಕಟ್ಟಡ ಬೇಕು, ಅದಕ್ಕೆ ಬರುವ ಸೈಂಟಿಸ್ಟ್‌ಗಳು ಉಳಕೊಳ್ಳಲು ಹಲವಾರು ಕ್ವಾರ್ಟರ್ಸ್ ಬೇಕು. ಅವರಿಗಾಗಿ ಹೋಟೆಲ್ ಬೇಕು. ಸೀತಾಪುರಕ್ಕೆ ಚತುಷ್ಪಥ ರಸ್ತೆ ಆಗಬೇಕು. ಇದಕ್ಕೆಲ್ಲಾ ಬೇಕಾದ ಅನುದಾನ ಕೊಡುವುದಾಗಿ ಘೋಷಣೆ ಆಗಿದೆ' ಅಂದಳು.

'ನಮ್ಮ ಸೀತಾಪುರ ನಿಜಕ್ಕೂ ಪುರವಾಗುತ್ತದೆ' ಎಂದು ಯುವಕನೊಬ್ಬ ಹೇಳಿದ.

ಆನಂದಣ್ಣ ಅದಕ್ಕೆ ತಮ್ಮ ಟಿಪ್ಪಣಿ ಕೊಡುತ್ತಾ, 'ಇದು ಎಷ್ಟು ದೊಡ್ಡದು ಅಂತ ನಮಗೆ ಊಹಿಸಲೂ ಆಗುವುದಿಲ್ಲ' ಎನ್ನುತ್ತಾ ಏನೆಲ್ಲಾ ಆಗಬಹುದು ಎಂಬುದನ್ನು ವಿವರಿಸಿದರು. ಇದಾದ ನಂತರ ಸಂದೇಶ್ ಮಾತಾಡಲು ಪ್ರಾರಂಭಿಸಿದ. ಆಮೇಲೆ ಸಂದೇಶ್ ಬಾಬಣ್ಣನನ್ನು ನಿಧಾನವಾಗಿ ವೇದಿಕೆಗೆ ಕರೆತಂದ.

'ನಾನು ಬಾಬಣ್ಣ ಅವರ ದೊಡ್ಡ ಅಭಿಮಾನಿ. ಇವರಂತೆ ಅಡುಗೆ ಮಾಡುವವರು ಎಲ್ಲೂ ಇಲ್ಲ. ಇವರ ಚಟ್ಟಂಬಡೆಯಂತೂ... ನನ್ನ ಬಾಯಲ್ಲಿ ಈಗಲೂ ನೀರು ಬರುತ್ತದೆ. ಬಾಬಣ್ಣ ಈಗ ಜಗತ್ತಿನಾದ್ಯಂತ ಪ್ರಸಿದ್ಧ. ಅವರಿಗೆ ಸಾವಿರಾರು ಜನ ಅಭಿಮಾನಿಗಳು ಇದ್ದಾರೆ' ಅಂದ. ಎಲ್ಲರೂ ಬಾಬಣ್ಣನನ್ನೇ ನೋಡತೊಡಗಿದರು.

ಸಂದೇಶ್ ಮುಂದುವರಿಸಿದ, 'ಈಗ ಕೇಳಿ, ನಮ್ಮ ಬಾಬಣ್ಣರನ್ನು ಮುಂಬೈಯ ಪ್ರಖ್ಯಾತ ಫೈವ್ ಸ್ಟಾರ್ ಹೋಟೆಲ್ ಸ್ಟಾರ್ ಶೆಫ್ ಆಗಿ ಒಂದು ತಿಂಗಳ ಮಟ್ಟಿಗೆ ಕರೆದಿದೆ. ಅಲ್ಲಿ ಅವರು 'ಸೀತಾಪುರ ಫೆಸ್ಟಿವಲ್' ಮಾಡಲಿದ್ದಾರೆ. ಅಷ್ಟೇ ಅಲ್ಲ, ನಮ್ಮ ಬಾಬಣ್ಣ ವಿಶ್ವದಾದ್ಯಂತ ಪ್ರಸಿದ್ಧವಾದ 'ಮಾಸ್ಟರ್ ಶೆಫ್' ಟಿ.ವಿ ಶೋನಲ್ಲಿ ಭಾಗವಹಿಸಲಿದ್ದಾರೆ. ಈ ಎರಡೂ ಎಂಗೇಜ್ಮೆಂಟ್‌ಗೆ ಬಾಬಣ್ಣ ಅವರಿಗೆ ಒಂದು ತಿಂಗಳಲ್ಲಿ ಹತ್ತು ಲಕ್ಷ ರೂಪಾಯಿ ಸಿಗಲಿದೆ' ಅಂದ.

ಬಾಬಣ್ಣ ಆ ವೇದಿಕೆಯಲ್ಲೇ ಎಲ್ಲರ ಎದುರು ಸಂದೇಶ್‌ಗೆ ಬೇಡವೆಂದರೂ ಸಾಷ್ಟಾಂಗ ನಮಸ್ಕರಿಸಿದ. ಹಾಗೇ ಶೆಟ್ಟರು, ಆನಂದಣ್ಣ ಹಾಗೂ ಸಂಜಯನಿಗೂ ಅಡ್ಡ ಬಿದ್ದ. ಸಂದೇಶ್‌ಗೆ ಏನು ಮಾಡಬೇಕು ಗೊತ್ತಾಗ್ಲಿಲ್ಲ. ಬಾಬಣ್ಣನನ್ನು ಗಟ್ಟಿಯಾಗಿ ತಬ್ಬಿಕೊಂಡ.

ಬಾಬಣ್ಣ ಮಾತನಾಡಿ 'ನನಗೆ ಏನು ಹೇಳಬೇಕೋ ಗೊತ್ತಿಲ್ಲ. ನಾನು ನನ್ನ ಜೀವನದಲ್ಲಿ ಒಂದು ಲಕ್ಷ ಗಳಿಸುತ್ತೇನೆ ಅಂತ ಎಣಿಸಿರಲಿಲ್ಲ. ಈಗ ಒಂದು ತಿಂಗಳಲ್ಲಿ ಹತ್ತು ಲಕ್ಷ. ನನಗೆ ಇದು ಕನಸೇ ನಿಜ ಜೀವನವೇ ಗೊತ್ತಾಗುದಿಲ್ಲ. ಎಲ್ಲಾ ನಮ್ಮ ದೇವರ ಕೃಪೆ. ಹಾಗೆಯೇ ನಮ್ಮ ಶೆಟ್ಟರು, ಆನಂದಣ್ಣ ಅವರ ಆಶೀರ್ವಾದ' ಅಂದ.

ಆನಂದಣ್ಣ ಕೂಡಲೇ ಬಾಬಣ್ಣನ ಕೈಹಿಡಿದು 'ನಮಗೆ ಹೇಳಬೇಡಿ ಬಾಬಣ್ಣ. ನಾವೆಲ್ಲಾ ನಿಮಿತ್ತ ಮಾತ್ರ. ನಿಜವಾದ ಗೌರವ ನಮ್ಮ ಕಾರಂತರಿಗೆ ಸೇರಬೇಕು' ಅಂದರು.

ಸಂದೇಶ್ ಮುಂದುವರಿಸಿ 'ನಿಮಗೆ ಇನ್ನೊಂದು ವಿಷಯ ಹೇಳಬೇಕು. ನಮ್ಮ ಸೀತಾಪುರದ ಹೆಂಗಸರ ಹಾಗೆ ಪಾಡ್ದನ ಹಾಡುವವರು ಯಾರೂ ಇಲ್ಲ. ಅವರು ಈಗಾಗಲೇ ಬಹಳ ಪ್ರಸಿದ್ಧರಾಗಿದ್ದಾರೆ. ಈಗ ನಮ್ಮ ಬೆಂಗಳೂರಿನ ಒಂದು ಟಿ.ವಿ. ಕಂಪನಿಯು ವಿಶೇಷವಾದ ಪಾಡ್ದನದ ಕಾರ್ಯಕ್ರಮ ಮಾಡುವುದಾಗಿ ಹೇಳಿದೆ. ಅವರ ಹತ್ರ ನಾನು ಇನ್ನೂ ಕಮರ್ಷಿಯಲ್ ಆಗಿ ಮಾತಾಡಿಲ್ಲ' ಅಂದ.

ಜನರಿಗೆ ಖುಷಿಯಲ್ಲಿ ಕುಣಿಯಬೇಕೆನ್ನುವಷ್ಟು ಸಂತೋಷವಾಯಿತು. ಸಂಜಯ್ ಈಗ ಮಾತನಾಡಲು ಎದ್ದುನಿಂತ. ಎಲ್ಲ ಜನ ಮೌನವಾಗಿ ಗಮನಕೊಟ್ಟು ಕೇಳತೊಡಗಿದರು.

'ನಾನು ಎರಡು ಪ್ರಕಟಣೆಗಳನ್ನು ಈಗ ಮಾಡಲಿದ್ದೇನೆ. ನೋಡಿ, ಮೊದಲನೆಯದ್ದು, ನಿಮಗೆ ಗೊತ್ತಿರುವ ಹಾಗೆ ನಾವು ಎರಡು ಕಾಟೇಜ್ ಕಟ್ಟುತ್ತಾ ಇದ್ದೇವೆ. ಒಂದು ಶೆಟ್ಟರ ಜಾಗದಲ್ಲಿ ಮತ್ತು ಇನ್ನೊಂದು ಆನಂದಣ್ಣನ ಜಾಗದಲ್ಲಿ. ಇವೆರಡರ ಕಾಮಗಾರಿ ಬರುವ ವಾರ ಸಂಪೂರ್ಣವಾಗಬೇಕು. ಅದಕ್ಕೆ ನಿಮ್ಮ ಸಹಾಯ ಬೇಕು. ಜೊತೆಗೆ ಈ ಕಾಟೇಜ್‌ನಲ್ಲಿ ಮೊದಲು ಉಳಕೊಳ್ಳುವ ಅವಕಾಶಕ್ಕೆ ನಾನು ಜಗತ್ತಿನಾದ್ಯಂತ ಹರಾಜು ಹಾಕುತ್ತೇನೆ.

ಯಾರು ಹೆಚ್ಚು ದುಡ್ಡು ಕೊಡುತ್ತಾರೋ ಅವರಿಗೆ ಮೊದಲ ಅವಕಾಶ. ಈ ರೀತಿ ಊರಿಗೆ ಬಂದವರು ಒಂದು ವಾರ ಇಲ್ಲಿ ಊರಲ್ಲಿರುತ್ತಾರೆ. ಅವರಿಗೆ ಸೀತಾಪುರದ ಸಂಪೂರ್ಣ ಅನುಭವವನ್ನು ನಾವು ಮಾಡಿಸಬೇಕು. ಹೊರಗಿನಿಂದ ಬಂದವರನ್ನು ಒಂದು ವಾರ ಊರಲ್ಲೆಲ್ಲಾ ಸುತ್ತಾಡಿಸಿ ಅವರಿಗೆ ಇಲ್ಲಿನ ವೈಶಿಷ್ಟ್ಯವನ್ನು ತೋರಿಸಬೇಕು. ಅದಕ್ಕೆ ನನಗೆ ನಿಮ್ಮ ಸಹಾಯ ಬೇಕು. ಇದರಲ್ಲಿ ನಿಮಗೆ ಏನು ಸಿಗಲಿದೆ ಎಂದು ಯೋಚಿಸಬೇಡಿ. ಈ ಎರಡು ಕಾಟೇಜ್ ಯಶಸ್ವಿಯಾದರೆ ಊರಲ್ಲಿ ಇಂತಹ ಹತ್ತಾರು ಕಾಟೇಜ್ ನಿಮ್ಮ ಜಾಗದಲ್ಲಿ ನಿರ್ಮಿಸಬಹುದು. ಪೇಟೆಯಿಂದ ಬಂದ ಜನಕ್ಕೆ ಇದೊಂದು 'ವಿಲೇಜ್ ಕಲ್ಚರಲ್ ಟೂರಿಸಂ' — ಅಂದರೆ ಹಳ್ಳಿಯ ಸಾಂಸ್ಕೃತಿಕ ದರ್ಶನವಾಗುತ್ತದೆ. ಇಲ್ಲಿಗೆ ಈ ರೀತಿ ಬರುವವರ ಕಾಟೇಜ್‌ಗಳ ಬಾಡಿಗೆಯಿಂದ ನೀವು ಬಹಳ ಶ್ರೀಮಂತರಾಗಬಹುದು. ಹಾಗೇ ಕೂತೂ ಉಣ್ಣಬಹುದು' ಅಂದ.

ಸೇರಿದ ಜನರಲ್ಲಿ ಗುಸುಗುಸು ಶುರು ಮಾಡಿದರು.

'ಎರಡನೆಯದ್ದು, ನಮ್ಮ ಸಂದೇಶ್ ಮತ್ತು ನವ್ಯ ಅವರು ಈಗ ಸೀತಾಪುರಕ್ಕೆ ಹೊರಜಗತ್ತು ಕಳುಹಿಸಿಕೊಟ್ಟ ಉಡುಗೊರೆ ಎಂದು ಹೇಳಿದರೆ ತಪ್ಪಾಗಲಾರದು. ಇಲ್ಲಿಗೆ ಬಂದು ಎರಡೇ ವಾರದಲ್ಲಿ ಸೀತಾಪುರಕ್ಕೆ ಅವರು ಈವರೆಗೆ ಕಂಡು ಕೇಳರಿಯದ ಕೊಡುಗೆ ಕೊಟ್ಟಿದ್ದಾರೆ. ಅವರು ಇನ್ನೆರಡು ವಾರ ನಮ್ಮ ಊರಲ್ಲಿ ನಮ್ಮ ಜೊತೆ ಇರುತ್ತಾರೆ. ಅವರ ಕಣ್ಣಲ್ಲಿ, ಕೈಯಲ್ಲಿ 'ಮ್ಯಾಜಿಕ್' ಇದೆ. ಇವರು ಮುಟ್ಟಿದ್ದು ಬಂಗಾರವಾಗುತ್ತದೆ.

ಈವರೆಗೆ ಅವರು ನಾನು ಹೇಳಿದ ವಿಷಯಗಳ ಮೇಲೆ ಕೆಲಸ ಮಾಡಿದ್ದಾರೆ. ಇವತ್ತು ನಾನು ಅವರನ್ನು ಪೂರ್ಣವಾಗಿ ಸೀತಾಪುರಕ್ಕೆ ಸಮರ್ಪಿಸುತ್ತೇನೆ. ಇನ್ನು ಉಳಿದ ಎರಡು ವಾರಗಳಲ್ಲಿ ನೀವು ಯಾರೂ ಅವರನ್ನು ಭೇಟಿಯಾಗಿ ನಿಮ್ಮ ಪ್ರತಿಭೆ ಪ್ರದರ್ಶಿಸಬಹುದು. ಆದರೆ ನಿರ್ಧಾರ ಅವರದ್ದು. ಅವರೇನಾದರೂ ನಿಮ್ಮನ್ನು ಸ್ವೀಕರಿಸಿದರೆ ಅದು ನಿಮ್ಮ ಅದೃಷ್ಟ. ಅದರೊಂದಿಗೆ ನೀವು ಅವರ ಜೊತೆಗೆ ಓಡಾಡಿದರೆ ಹೇಗೆ ಸೋಶಿಯಲ್ ಮೀಡಿಯಾ ಉಪಯೋಗಿಸಬಹುದು, ಹೇಗೆ ನಿಮ್ಮದೇ ಚಾನೆಲ್ ಮಾಡಬಹುದು ಎನ್ನುವುದೂ ಗೊತ್ತಾಗುತ್ತದೆ' ಅಂದ.

(ಸಶೇಷ)